ಮೀರಿದ ತನ್ನಂತವಳಿಗೆ ಆಯ್ಕೆಯ ಅವಕಾಶ ಇಲ್ಲವೇ ಇಲ್ಲವೆಂಬಷ್ಟು ಕಡಿಮೆ ಎನ್ನುವ ವಾಸ್ತವಪ್ರಜ್ಞೆ ಅವಳಿಗಿದೆ. ಇದುವರೆಗೆ ಸರ್ವತಂತ್ರಸ್ವತಂತ್ರಳಾಗಿ ಬದುಕಿದವಳಿಗೆ ಬಂಧನದ ಬೇಡಿ ಅಗತ್ಯವೇ? ಕಾಮನೆಗಳು ನಿದ್ದೆ ಕಸಿಯದ ವಯಸ್ಸಿಗೆ ಬಂದ ಮೇಲೆ? ಇಬ್ಬರು ತಂಗಿಯರಿಗೆ ಮದುವೆ ಮಾಡಿ ಗಂಡನ ಮನೆಗೆ ಕಳಿಸಿಕೊಟ್ಟ ಅನುಭವ ಅವಳಿಗಿದೆ. ತಂಗಿಯರ ಆಗ್ರಹದ ಕರೆಗೆ ಓಗೊಟ್ಟು ಅಪರೂಪಕ್ಕಾದರೂ ಅವರ ಮನೆಗೆ ಹೋಗಿದ್ದಾಳೆ ಭಾಗ್ಯಲಕ್ಷ್ಮಿ. ಒಂದೆರಡು ದಿನಗಳ ಮಟ್ಟಿಗೆ ಇರುವುದಾದರೂ ಅಲ್ಲಿ ಕಾಡುವ ಅಪರಿಚಿತ ಭಾವನೆ ತನ್ನ ಸ್ವಭಾವದೋಷವೇ ಇರಬಹುದು ಎಂದು ಅವಳಿಗೆ ಅನಿಸಿದ್ದಿದೆ. ನಾಳೆ ತನಗೆ ವಯಸ್ಸಾದಾಗ ಹೀಗೊಂದು ಆಶ್ರಯ ಬಯಸಿ ತಾನು ಅವರ ನೆರಳಿಗೆ ಹೋಗುವುದು ಸುಳ್ಳೇಸುಳ್ಳು. ಅವರು ಬಂದು ತನ್ನ ಸೇವೆ ಮಾಡಬಹುದೆಂಬ ನಿರೀಕ್ಷೆಯೂ. ಮದುವೆಯಾಗಿ ಮಕ್ಕಳಾದ ಮೇಲೆ ಎಲ್ಲರಿಗೂ ತಮ್ಮ ಸಂಸಾರ ಪ್ರಧಾನವಾಗಿಬಿಡುತ್ತದೆ. ಹಾಗಾಗಬೇಕಾದ್ದು ಸಹಜ ಕೂಡಾ. ವನಿತನಿಗೆ ಮದುವೆ ಮಾಡಿ ಕಳಿಸಿಕೊಟ್ಟರೆ ಕ್ರಮೇಣ ಅವಳೂ ತನ್ನಿಂದ ದೂರ ಸರಿದು ಗುಬ್ಬಚ್ಚಿಗೂಡಿನಂತಾ ತನ್ನ ಸಂಸಾರದೊಳಗೆ ಸೇರಿಕೊಂಡುಬಿಡುತ್ತಾಳೆ. ತಾನು ಯಾವತ್ತೂ ಹೊರಗಿನವಳು. ಎಲ್ಲಿಯೂ ಸಲ್ಲದವಳು. ತನ್ನ ಬಳಿ ಇರುವ ಹಣಕ್ಕೆ ಗೌರವ ಇರಬಹುದಾದರೂ ಅದು ಕೇವಲ ತನಗಾಗಿಯಲ್ಲ. ಮದುವೆಯಾಗಿರುವ ತಂಗಿಯರು ತನ್ನ ಮೇಲೆ

